**FEBRUARY 13, 2025**

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

**ಆಕಾಶವಾಣಿಯ ನಮ್ಮ ಆತ್ಮೀಯ ಕೇಳುಗರಿಗೆಲ್ಲ, ವಿಶ್ವ ರೇಡಿಯೋ ದಿನದ ಹಾರ್ದಿಕ ಶುಭಾಶಯಗಳು**

<><><>

- **ಸಣ್ಣ ಹಣಕಾಸು ಸಂಸ್ಥೆಗಳ ಸುಗ್ರೀವಾಜ್ಞೆಗೆ,** ಸಲಹೆಗಳ ಜೊತೆ, ರಾಜ್ಯಪಾಲರ ಅಂಕಿತ.
- **43 ನೂತನ ಸ್ವಯಂಚಾಲಿತ** ಚಾಲನಾ ಪರೀಕ್ಷೆ ಪಥ ಹಾಗೂ 11 ಪರೀಕ್ಷಾ ಕೇಂದ್ರಗಳು, ವ ರ್ಷಾಂತ್ಯದೊಳಗೆ, ಕಾರ್ಯಾರಂಭ.
- **ಏರೋ ಇಂಡಿಯಾ ವೈಮಾನಿಕ ಮೇಳ;** ಇಂದು ಮತ್ತು ನಾಳೆ, ಪ್ರದರ್ಶನ ವೀಕ್ಷಿಸಲು, ಸಾರ್ವಜನಿಕರಿಗೆ ಅವಕಾಶ.
- **ಮಾಧವ ಗಾಡ್ಗೀಳ್ ಆತ್ಮಕಥೆಯ** ಕನ್ನಡಾನುವಾದ, 'ಏರುಘಟ್ಟದ ನಡಿಗೆ', ಬೆಂಗಳೂರಿನಲ್ಲಿ ಇಂದು, ಬಿಡುಗಡೆ.

<><><>

**ಸಣ್ಣ ಹಣಕಾಸು ಸಂಸ್ಥೆಗಳ ಸುಗ್ರೀವಾಜ್ಞೆಗೆ,** ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅಂಕಿತ ಹಾಕಿದ್ದಾರೆ. ಹಲವು ಸಲಹೆಗಳನ್ನು ನೀಡಿ, ಅಧಿವೇಶನದಲ್ಲಿ ಚರ್ಚಿಸುವಂತೆ ತಿಳಿಸಿ, ಅನುಮೋದಿಸಿದ್ದಾರೆ. ಸಣ್ಣ ಹಣಕಾಸು ಸಂಸ್ಥೆಗಳ ನಿಯಂತ್ರಣಕ್ಕೆ ಸಂಬಂಧಿಸಿ, ಹೊಸ ನಿಯಮಗಳು ಕೂಡಲೇ ಜಾರಿಗೊಳ್ಳುವ ಸಾಧ್ಯತೆಯಿದೆ. ಮುಂಬರುವ ಅಧಿವೇಶನದಲ್ಲಿ ಈ ಬಗ್ಗೆ ಚರ್ಚೆ ನಡೆಯಲಿದೆ.

<><><>

**ರಾಜ್ಯದ ವಿವಿಧೆಡೆ, 43 ನೂತನ ಸ್ವಯಂಚಾಲಿತ** ಚಾಲನಾ ಪರೀಕ್ಷೆ ಪಥ ಹಾಗೂ 11 ಸ್ವಯಂಚಾಲಿತ ಪರೀಕ್ಷಾ ಕೇಂದ್ರಗಳು, ಈ ವ ರ್ಷಾಂತ್ಯದೊಳಗೆ, ಕಾರ್ಯಾರಂಭಿಸಲಿವೆ ಎಂದು, ಸಾರಿಗೆ ಖಾತೆ ಸಚಿವ ರಾಮಲಿಂಗಾ ರೆಡ್ಡಿ ತಿಳಿಸಿದ್ದಾರೆ. ಮಂಗಳೂರಿನಲ್ಲಿ ಸಚಿವರು ಸುದ್ದಿಗೋಷ್ಠಿ ನಡೆಸಿದರು. ಸ್ವಯಂಚಾಲಿತ ಡ್ರೈವಿಂಗ್ ಟೆಸ್ಟ್ ಟ್ರ್ಯಾಕ್ ದೇಶದಲ್ಲೇ ಮೊದಲ ಬಾರಿಗೆ ಕಾರ್ಯಾರಂಭಿಸಲಿವೆ. ಚಾಲನಾ ಪರವಾನಿಗೆ ಪರೀಕ್ಷಾ ಪ್ರಕ್ರಿಯೆ, ಸೆನ್ಸಾರ್ ಮೂಲಕ ಸ್ವಯಂ ಚಾಲಿತವಾಗಿ ನಿರ್ವಹಣೆಯಾಗಲಿದೆ. ಸ್ವಯಂಚಾಲಿತ ಟೆಸ್ಟಿಂಗ್ ಸೆಂಟರ್‌ಗಳು, ವಾಹನಗಳ ಫಿಟ್ನೆಸ್ ಸರ್ಟಿಫಿಕೆಟ್ ಹಾಗೂ ಆರ್.ಸಿ. ನವೀಕರಣ ಕೆಲಸಗಳನ್ನು ಸುಲಭವಾಗಿ ನಿರ್ವಹಿಸಲಿವೆ. ಪ್ರಸ್ತುತ 16 ಸಾವಿರ ಎಚ್.ಎಸ್.ಆರ್.ಪಿ. ನಂಬರ್ ಪ್ಲೇಟ್‌ಗಳ ಅಳವಡಿಕೆ ಬಾಕಿ ಇದೆ ಎಂದರು.

<><><>

**ಡ್ರಗ್ ಆ್ಯಕ್ಷನ್ ಫೋರಮ್ ಕರ್ನಾಟಕ,** ರಾಜ್ಯಾದ್ಯಂತ 10 ಜಿಲ್ಲೆಗಳಲ್ಲಿ, 11 ದಿನಗಳ ಆರೋಗ್ಯ ಹಕ್ಕಿನ ಜಾಥಾ ಆಯೋಜಿಸಿದೆ. ಕಳೆದ 3ನೇ ತಾರೀಖಿನಿಂದ, ಡ್ರಗ್ ಆ್ಯಕ್ಷನ್ ಫೋರಮ್, ಕರ್ನಾಟಕ, ಬೀದರ್‌ನಿಂದ ಜನ ಜಾಗೃತಿ ಜಾಥಾ ಆರಂಭಿಸಿದೆ. ಸಾರ್ವತ್ರಿಕ ಆರೋಗ್ಯ ಆಂದೋಲನ ಕರ್ನಾಟಕ ವತಿಯಿಂದ, ಇಂದು ಕೋಲಾರದಲ್ಲಿ ಹಾಗೂ ನಾಳೆ ಬೆಂಗಳೂರಿನಲ್ಲಿ ಆರೋಗ್ಯ ಹಕ್ಕಿನ ಜಾಥಾ ನಡೆಯಲಿದೆ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ ಸಂಚಾಲಕ, ಧಾರವಾಡದ ಡಾಕ್ಟರ್ ಗೋಪಾಲ ನರಸಿಂಹ ದಾಬಡೆ.

<><><>

**ಬೀದರ್, ಕಲಬುರಗಿ, ವಿಜಯಪುರ** ಮತ್ತು ಯಾದಗಿರಿ ಜಿಲ್ಲೆಗಳ, ಕೆಲ ತಾಲೂಕುಗಳಲ್ಲಿ, ಆನೆಕಾಲು ರೋಗ ಸಮಸ್ಯಾತ್ಮಕ ಎಂದು ಕಂಡುಬಂದ ಹಿನ್ನೆಲೆ, ಎಂ.ಡಿ.ಎ. ಕಾರ್ಯಕ್ರಮ ಮುಂದುವರೆಸಲಾಗುತ್ತಿದೆ. ಈ ತಿಂಗಳ 28ನೇ ತಾರೀಖಿನ ವರೆಗೆ, ಸಾಮೂಹಿಕ ಔ ಷಧಿ ನುಂಗಿಸುವ ಕಾರ್ಯ ಈ ಜಿಲ್ಲೆಗಳಲ್ಲಿ ನಡೆಯಲಿದೆ. ಆನೆಕಾಲು ರೋಗ, ಉಡುಪಿ, ಉತ್ತರಕನ್ನಡ, ದಕ್ಷಿಣಕನ್ನಡ, ಬಾಗಲಕೋಟೆ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಸಮಸ್ಯಾತ್ಮಕವಲ್ಲ ಎಂದು, ಪರಿಗಣಿಸಲಾಗಿದೆ.

<><><>

**ವ ರ್ಷಕ್ಕೆ ಒಂದು ಬಾರಿ ಮಾತ್ರ,** ಅರ್ಹ ವ್ಯಕ್ತಿಯ ವಯಸ್ಸಿಗೆ ಅನುಗುಣವಾಗಿ, ಮಾತ್ರೆಗಳನ್ನು ನುಂಗಿಸಿ, ಎಡಗೈ ಕಿರು ಬೆರಳಿಗೆ ಅಳಿಸಲಾಗದ ಶಾಯಿಯಲ್ಲಿ ಗುರುತು ಹಾಕಲಾಗುತ್ತದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

<><><>

**ಪಶು ಸಂಗೋಪನಾ ಇಲಾಖೆಯಲ್ಲಿ,** 18 ಸಾವಿರಕ್ಕೂ ಹೆಚ್ಚು ಸಿಬ್ಬಂದಿ ಅಗತ್ಯವಿದ್ದು, ಅವಶ್ಯಕ ಹುದ್ದೆಗಳನ್ನು ಹಂತ ಹಂತವಾಗಿ ಶೀಘ್ರ ಭರ್ತಿ ಮಾಡಲಾಗುವುದು ಎಂದು, ಪಶು ಸಂಗೋಪನಾ ಖಾತೆ ಸಚಿವ ಕೆ.ವೆಂಕಟೇಶ ತಿಳಿಸಿದ್ದಾರೆ. ಹಾವೇರಿ ಜಿಲ್ಲಾ ಪಶುರೋಗ ತನಿಖಾ ಪ್ರಯೋಗಾಲಯ ಹಾಗೂ ಮಾಹಿತಿ ಕೇಂದ್ರವನ್ನು ಉದ್ಘಾಟಿಸಿ, ಮಾತನಾಡಿದರು. ಕೆಪಿಎಸ್ಸಿ ಮೂಲಕ 400 ಜನರನ್ನು ಆಯ್ಕೆ ಮಾಡಲು ಸೂಚಿಸಲಾಗಿದೆ ಎಂದರು.

<><><>

**ಆಯುರ್ವೇದ ಔ ಷಧಿಯ ಸಸ್ಯಕಾಶಿ,** ಗದಗ ಜಿಲ್ಲೆ, ಮುಂಡರಗಿ ತಾಲೂಕಿನ ಕಪ್ಪತಗುಡ್ಡದಲ್ಲಿ ಮತ್ತೆ ಬೆಂಕಿ ಕಾಣಿಸಿಕೊಂಡು, ನೂರಾರು ಹೆಕ್ಟರ್ ಪ್ರದೇಶ ಬೆಂಕಿಗೆ ಆಹುತಿಯಾಗಿದೆ. ಮುಂಡರಗಿ ತಾಲೂಕಿನ, ಡೋಣಿ ಗ್ರಾಮದ ಬಳಿ ಗುಡ್ಡಕ್ಕೆ ಬೆಂಕಿ ಹತ್ತಿ, ನಂದಿವೇರಿ ಮಠದ ಹಿಂಭಾಗ, ಬಂಗಾರಕೊಳ್ಳ, ದೊಡ್ಡ ಬಂಗಾರಕೊಳ್ಳ, ಉಪ್ಪಾರ ತಟ್ಟು, ನವಣೆ ರಾಶಿ, ಎತ್ತಿನಗುಡ್ಡದಲ್ಲಿ ಅಪಾರ ಪ್ರಮಾಣದ ಕಾಡು ನಾಶವಾಗಿದೆ. ನಂದಿವೇರಿ ಸಂಸ್ಥಾನ ಮಠದ ಶ್ರೀ ಶಿವಕುಮಾರ ಸ್ವಾಮೀಜಿ ನೇತೃತ್ವದಲ್ಲಿ, ಇಂದು ಮುಖ್ಯಮಂತ್ರಿಯವರನ್ನು ನಿಯೋಗ ಭೇಟಿ ಮಾಡಿ, ಕಪ್ಪತಗುಡ್ಡದ ರಕ್ಷಣೆಗೆ ಮನವಿ ಸಲ್ಲಿಸಲಿದೆ ಎಂದು, ಪ್ರಕಟಣೆ ತಿಳಿಸಿದೆ.

<><><>

**ಬೆಂಗಳೂರಿನ ಯಲಹಂಕ ವಾಯುನೆಲೆಯಲ್ಲಿ** ಆಯೋಜಿತ, ಏರೋ ಇಂಡಿಯಾ 2025, ಬೃಹತ್ ವೈಮಾನಿಕ ಮೇಳದ ನಾಲ್ಕನೇ ದಿನವಾದ ಇಂದು ಮತ್ತು ಐದನೇ ದಿನವಾದ ನಾಳೆ, ಸಾರ್ವಜನಿಕರಿಗೆ ವೈಮಾನಿಕ ಪ್ರದರ್ಶನದ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ. ಮೂರನೇ ದಿನವಾದ ನಿನ್ನೆ, ಸೂರ್ಯಕಿರಣ್ ಸೇರಿದಂತೆ, ಹಲವು ವಿಶೇ ' ವಿಮಾನಗಳ, ವೈಮಾನಿಕ ಪ್ರದರ್ಶನ ಜರುಗಿತು. ರಕ್ಷಣಾ ಪರಿಕರಗಳ ವ್ಯಾಪಾರಕ್ಕೆ ಸಂಬಂಧಿಸಿ, ನಿಯೋಗ ಮಟ್ಟದ ಮಾತುಕತೆಗಳು ಫಲಪ್ರದವಾಗಿ ನಡೆದವು.

<><><>

**ಸಮಾರೋಪ ಸಮಾರಂಭದಲ್ಲಿ ಮಾತನಾಡಿದ,** ಕೇಂದ್ರದ ರಕ್ಷಣಾ ಖಾತೆ ಸಚಿವ ರಾಜನಾಥ್ ಸಿಂಗ್, ಪ್ರಧಾನಮಂತ್ರಿಯವರ ಆತ್ಮನಿರ್ಭರ ಪರಿಕಲ್ಪನೆಯ ಸಾಕಾರವಾಗಿ, ಶೇಕಡ 65 ರಿಂದ 70 ರಷ್ಟು, ರಕ್ಷಣಾ ಉತ್ಪನ್ನಗಳನ್ನು ಸ್ವದೇಶದಲ್ಲಿ ಉತ್ಪಾದಿಸುತ್ತಿರುವುದು, ಹೆಮ್ಮೆಯ ಸಂಗತಿ ಎಂದರು.

<><><>

**ಉತ್ತರಕನ್ನಡ ಜಿಲ್ಲೆ, ಶಿರಸಿ ತಾಲೂಕು,** ಬಕ್ಕೇಮನೆಯ ಹೆಸರಾಂತ ಪರಿಸರ ಕಾರ್ಯಕರ್ತರಾದ ನಾಗೇಶ ಹೆಗಡೆ ಮತ್ತು ಶಾರದಾ ಗೋಪಾಲ ಅವರು, ಅಂತಾರಾಷ್ಟ್ರೀಯ ಪರಿಸರ ವಿಜ್ಞಾನಿ ಪ್ರೊಫೆಸರ್ ಮಾಧವ ಗಾಡ್ಗೀಳ್ ಅವರ ಆತ್ಮಕಥೆ, 'A walk up the hill' ಕೃತಿಯನ್ನು, ಕನ್ನಡಕ್ಕೆ ಏರುಘಟ್ಟದ ನಡಿಗೆ ಶೀರ್ಷಿಕೆಯೊಂದಿಗೆ ಅನುವಾದಿಸಿದ್ದಾರೆ. ಮಂಗಳೂರಿನ ಆಕೃತಿ ಆಶಯ ಪಬ್ಲಿಕೇಷನ್ಸ್‌ನ ಕಲ್ಲೂರು ನಾಗೇಶ, ಹಲವು ಸಂಸ್ಥೆಗಳ ಸಹಯೋಗದಲ್ಲಿ, ಇಂದು ಬೆಳಗ್ಗೆ 10 ಗಂಟೆಗೆ, ಬೆಂಗಳೂರಿನ ಚಿತ್ರಕಲಾ ಪರಿಷತ್ತಿನ ಸಭಾಂಗಣದಲ್ಲಿ, ಕೃತಿ ಲೋಕಾರ್ಪಣೆ ಕಾರ್ಯಕ್ರಮ ಆಯೋಜಿಸಿದ್ದಾರೆ.

<><><>

**ಪರಿಸರ ಖಾತೆ ಸಚಿವ** ಈಶ್ವರ ಖಂಡ್ರೆ, ಕೃತಿಯನ್ನು ಲೋಕಾರ್ಪಣೆಗೊಳಿಸಲಿದ್ದಾರೆ.

<><><>

**ಪ್ರದೇಶ ಸಮಾಚಾರಕ್ಕಾಗಿ** ಮಾಹಿತಿ ನೀಡಿದ್ದಾರೆ, ಕೃತಿಯ ಸಹ ಅನುವಾದಕಿ ಶಾರದಾ ಗೋಪಾಲ.

<><><>

**ಹಂಪಿ ಉತ್ಸವ ಈ ತಿಂಗಳ 28 ರಿಂದ,** ಮಾರ್ಚ್ ಎರಡನೇ ತಾರೀಖಿನ ವರೆಗೆ ಆಯೋಜಿತವಾಗಿದ್ದು, ಗಾಯತ್ರಿ ಪೀಠದ ಬಳಿ, 5 ಎಕರೆ ಜಾಗೆಯಲ್ಲಿ ನಿರ್ಮಿಸಲಾಗುತ್ತಿರುವ, ಮುಖ್ಯ ವೇದಿಕೆ ಸ್ಥಳಕ್ಕೆ, ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ ಭೇಟಿ ನೀಡಿ, ಸಿದ್ಧತೆ ಪರಿಶೀಲಿಸಿದರು. ಬಳಿಕ ಸುದ್ದಿಗಾರರಿಗೆ ಮಾಹಿತಿ ನೀಡಿ, ಮುಖ್ಯ ವೇದಿಕೆಗೆ ಎಂ.ಪಿ. ಪ್ರಕಾಶ ಅವರ ಹೆಸರನ್ನು ಅಂತಿಮಗೊಳಿಸಲಾಗಿದೆ ಎಂದರು. ಉತ್ಸವಕ್ಕೆ ಬಂದ ಜನ, ಹಂಪಿಯ ಜಗತ್ ಪ್ರಸಿದ್ಧ ಸ್ಮಾರಕಗಳನ್ನು ಸಹ ವೀಕ್ಷಿಸಬೇಕು ಎಂಬ ಉದ್ದೇಶದಿಂದ, 4 ವೇದಿಕೆಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಸೇರಿದಂತೆ, ಧ್ವನಿ ಬೆಳಕು ವ್ಯವಸ್ಥೆ ಇರಲಿದೆ ಎಂದರು.

<><><>

**ರನ್ನ ಕವಿಯ ವ್ಯಕ್ತಿತ್ವ ಹಾಗೂ ಕೃತಿತ್ವವನ್ನು** ಬಿಂಬಿಸುವ, ರನ್ನ ವೈಭವ ಉತ್ಸವದ ಹಿನ್ನೆಲೆ, ಇಂದು ಬೆಳಗ್ಗೆ 11 ಗಂಟೆಗೆ, ಬಾಗಲಕೋಟೆ ಜಿಲ್ಲೆ, ಮುಧೋಳ ತಾಲೂಕು, ರನ್ನ ಬೆಳಗಲಿಯಿಂದ, 'ರನ್ನ ರಥ ಯಾತ್ರೆ'ಗೆ ಚಾಲನೆ ದೊರಕಲಿದೆ. ಜಿಲ್ಲಾ ಉಸ್ತುವಾರಿ ಸಚಿವ, ಆರ್.ಬಿ.ತಿಮ್ಮಾಪುರ ಅವರು, ರಥ ಯಾತ್ರೆಗೆ ಚಾಲನೆ ನೀಡಲಿದ್ದಾರೆ. ರನ್ನ ರಥ ಯಾತ್ರೆ, ಈ ತಿಂಗಳ 22ರ ವರೆಗೆ, ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಂಚರಿಸಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಬೆಂಗಳೂರಿನಲ್ಲಿ ಈ ತಿಂಗಳ 19 ರಂದು ರಥಯಾತ್ರೆ ಉದ್ಘಾಟಿಸಲಿದ್ದಾರೆ.

<><><>

**ಭಾರತದ ಕೋಗಿಲೆ ಎಂದೇ ಖ್ಯಾತಿವೆತ್ತ,** ಕವಯಿತ್ರಿ ಹಾಗೂ ಸ್ವಾತಂತ್ರ್ಯ ಸೇನಾನಿ ಸರೋಜಿನಿ ನಾಯ್ಡು ಅವರ ಜಯಂತ್ಯುತ್ಸವ ಹಿನ್ನೆಲೆ, ಇಂದು ದೇಶಾದ್ಯಂತ ರಾಷ್ಟ್ರೀಯ ಮಹಿಳಾ ದಿನಾಚರಣೆ ಆಯೋಜಿತವಾಗಿದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ, ಮಹಿಳೆಯರ ಸಬಲೀಕರಣಕ್ಕಾಗಿ, ಆತ್ಮನಿರ್ಭರತೆಗಾಗಿ ಧ್ವನಿಯೆತ್ತಿದ, ಮಹಾತ್ಮ ಗಾಂಧೀಜಿ ಅವರ ಮಾರ್ಗದರ್ಶನದಲ್ಲಿ, ಸ್ವಾತಂತ್ರ್ಯ ಹೋರಾಟಕ್ಕಾಗಿ, ತಮ್ಮನ್ನು ಸಮರ್ಪಿಸಿಕೊಂಡ, ಗಾನ ಕೋಗಿಲೆ ಸರೋಜಿನಿ ನಾಯ್ಡು ಅವರ ಕೊಡುಗೆಯನ್ನು ಸ್ಮರಿಸಲು, ಈ ದಿನ ಮೀಸಲಿದೆ.

<><><>

**ಭಾರತ ಹುಣ್ಣಿಮೆ ಅಂಗವಾಗಿ, ಬೆಳಗಾವಿ ಜಿಲ್ಲೆ,** ಸವದತ್ತಿ ತಾಲೂಕು, ಶ್ರೀ ಕ್ಷೇತ್ರ ಯಲ್ಲಮ್ಮನ ಗುಡ್ಡದಲ್ಲಿ, ವಿಶೇಷ ಪೂಜಾ ಕೈಂಕರ್ಯ ಜರುಗಿತು. ಜೋಗುಳ ಬಾವಿ ಹಾಗೂ ಶ್ರೀ ಕ್ಷೇತ್ರದಲ್ಲಿ ಸಾಲು–ಸಾಲು ಅಲಂಕೃತ ಚಕ್ಕಡಿಗಳು ಗಮನ ಸೆಳೆದವು.

<><><>

**ಉತ್ತರ ಕನ್ನಡ ಜಿಲ್ಲೆ, ಜೊಯಿಡಾ ತಾಲೂಕಿನ,** ಪ್ರಸಿದ್ಧ ಉಳವಿ ಕ್ಷೇತ್ರದಲ್ಲಿ, ಶ್ರೀ ಚನ್ನಬಸವಣ್ಣನವರ ರಥೋತ್ಸವ ಹಾಗೂ ಉಳವಿ ಜಾತ್ರೆ, ಇಂದಿನಿಂದ 15ರ ವರೆಗೆ, ಜರುಗಲಿದೆ. ಲಕ್ಷಾಂತರ ಭಕ್ತರು ಪಾಲ್ಗೊಂಡು, ಪೂಜೆ ಸಲ್ಲಿಸಲಿದ್ದಾರೆ.

<><><>

**ಇಂದು ವಿಶ್ವ ರೇಡಿಯೋ ದಿನ.** ಬಾನುಲಿ ಮತ್ತು ಹವಾಮಾನ ಬದಲಾವಣೆ, ಈ ವರ್ಷದ ಆಚರಣೆ ಧ್ಯೇಯ. ಆಕಾಶವಾಣಿ ಸೇರಿದಂತೆ, ಸಮುದಾಯ ಬಾನುಲಿ ಮತ್ತು ಹ್ಯಾಮ್ ರೇಡಿಯೋ ಕೇಂದ್ರಗಳು ಇಂದು, ವಿಶೇಷ ಕಾರ್ಯಕ್ರಮ ಆಯೋಜಿಸಿ, ಕೇಳುಗರ ಸಂಭ್ರಮಾಚರಣೆ ಇಮ್ಮಡಿ ಗೊಳಿಸಲಿವೆ.

<><><>

- **ಸಣ್ಣ ಹಣಕಾಸು ಸಂಸ್ಥೆಗಳ ಸುಗ್ರೀವಾಜ್ಞೆಗೆ,** ಸಲಹೆಗಳ ಜೊತೆ, ರಾಜ್ಯಪಾಲರ ಅಂಕಿತ.
- **43 ನೂತನ ಸ್ವಯಂಚಾಲಿತ** ಚಾಲನಾ ಪರೀಕ್ಷೆ ಪಥ ಹಾಗೂ 11 ಪರೀಕ್ಷಾ ಕೇಂದ್ರಗಳು, ವ ರ್ಷಾಂತ್ಯದೊಳಗೆ, ಕಾರ್ಯಾರಂಭ.
- **ಏರೋ ಇಂಡಿಯಾ ವೈಮಾನಿಕ ಮೇಳ;** ಇಂದು ಮತ್ತು ನಾಳೆ, ಪ್ರದರ್ಶನ ವೀಕ್ಷಿಸಲು, ಸಾರ್ವಜನಿಕರಿಗೆ ಅವಕಾಶ.
- **ಮಾಧವ ಗಾಡ್ಗೀಳ್ ಆತ್ಮಕಥೆಯ** ಕನ್ನಡಾನುವಾದ, 'ಏರುಘಟ್ಟದ ನಡಿಗೆ', ಬೆಂಗಳೂರಿನಲ್ಲಿ ಇಂದು, ಬಿಡುಗಡೆ.

<><><>